[III]

Reg. No. D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

**(EXTRAORDINARY)**
ವಿಶೇಷ ಸಂಚಿಕೆ

भाग—IX अनुभाग 1
PART IX SECTION 1
ಭಾಗ IX ವಿಭಾಗ 1

**प्राधिकार से प्रकाशित**
Published by Authority
ಪ್ರಾಧಿಕಾರದ ಮೇರೆಗೆ ಪ್ರಕಟಿತವಾಗಿದೆ

| | | | |
|---|---|---|---|
| सं—1 | नई दिल्ली सोमवार, आगष्ट 5, 1985 | श्रावण 14, 1907 (शक) | खण्ड—3 |
| No. 1 | New Delhi Monday, August 5, 1985 | Shravana 14, 1907 (Saka) | Vol. 3 |
| ಸಂಖ್ಯೆ ೧ | ನವದೆಹಲಿ ಸೋಮವಾರ, ಆಗಸ್ಟ್ ೫, ೧೯೮೫ | ಶ್ರಾವಣ ೧೪, ೧೯೦೭ (ಶಕ) | ಸಂಪುಟ ೩ |


## MINISTRY OF LAW, AND JUSTICE
(Legislative Department)

New Delhi, May 22, 1985/ Jaistha 1907 (Sakha)

The translations in Kannada of the following namely.—(1) The Fatal Accidents Act, 1855 (2) The Converts Marriage Dissolution Act, 1866[(ii)] (3) The Indian Easement Act, 1882 (4) The Agriculturists' Loans Act, 1884 (5) The Indian Reserve Forces Act, 1888 (6) The Prevention of Seditious Meetings Act, 1911 (7) The Hindu Disposition of property Act, 1916 (8) The Mica Mines Labour Welfare Fund Act, 1946 (9) The Delivery of Books and Newspapers (Public Libraries) Act, 1954 (10) The Meternity Benefit Act, 1961 (11) The Motor Transports Workers Act, 1961 (12) The Public Provident Fund Act, 1968 and (13) The Authorised Translations (Central Laws) Act, 1973–are hereby published under the authority of the president and shall be deemed to be the authorised translations thereof in Kannada under clause (a) of Section 2 of the authorised Translations (central laws) Act, 1973 (50 of 1973).

ಕೆಳಕಂಡ ಕೇಂದ್ರ ಅಧಿನಿಯಮಂಗಳ ಎಂದರೆ, (೧) ಪ್ರಾಣಾಂತಿಕ ದುರ್ಘಟನಾ ಅಧಿನಿಯಮ, ೧೮೫೫; (೨) ಮತಾಂತರಿತರ ವಿವಾಹ ವಿಘಟನಾ ಅಧಿನಿಯಮ, ೧೮೬೬; (೩) ಭಾರತ ಅನುಭೋಗ ಅಧಿನಿಯಮ, ೧೮೮೨; (೪) ಬೇಸಾಯಗಾರ ಸಾಲ ಅಧಿನಿಯಮ ೧೮೮೪; (೫) ಭಾರತೀಯ ಮೀಸಲು ದಳ ಅಧಿನಿಯಮ, ೧೮೮೮; (೬) ರಾಜದ್ರೋಹಾತ್ಮಕ ಸಭಾ ಪ್ರತಿಬಂಧಕ ಅಧಿನಿಯಮ, ೧೯೧೧; (೭) ಹಿಂದೂ ಸ್ವತ್ತಿನ ವಿಲೆ ಅಧಿನಿಯಮ, ೧೯೧೬; (೮) ಅಭ್ರಕ ಗಣಿಗಳ ಕಾರ್ಮಿಕರ ಕಲ್ಯಾಣ ನಿಧಿ ಅಧಿನಿಯಮ, ೧೯೪೬; (೯) ಪುಸ್ತಕ ಮತ್ತು ವೃತ್ತಪತ್ರಿಕೆ (ಸಾರ್ವಜನಿಕ ಗ್ರಂಥಾಲಯಗಳಿಗೆ) ಒಪ್ಪಿಸುವ ಅಧಿನಿಯಮ, ೧೯೫೪; (೧೦) ಪ್ರಸೂತಿ ಸೌಕರ್ಯ ಅಧಿನಿಯಮ, ೧೯೬೧; (೧೧) ಮೋಟಾರು ಸಾರಿಗೆ ಕೆಲಸಗಾರರ ಅಧಿನಿಯಮ, ೧೯೬೧; (೧೨) ಸಾರ್ವಜನಿಕ ಭವಿಷ್ಯ ನಿಧಿ ಅಧಿನಿಯಮ, ೧೯೬೮; ಮತ್ತು (೧೩) (ಕೇಂದ್ರ ಕಾನೂನು) ಅಧಿಕೃತ ಭಾಷಾಂತರ ಅಧಿನಿಯಮ, ೧೯೭೩.—ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಭಾಷಾಂತರಗಳ (ಕೇಂದ್ರ ಕಾನೂನುಗಳ) ಅಧಿನಿಯಮ, ೧೯೭೩ ರ (೧೯೭೩ ರ ೫೦) ೨ನೇ ಪ್ರಕರಣದ (ಕ) ಖಂಡದ ಮೇರೆಗೆ ಇವುಗಳನ್ನು ಆ ಅಧಿನಿಯಮಂಗಳ ಅಧಿಕೃತ ಕನ್ನಡ ಭಾಷಾಂತರವೆಂದು ಭಾವಿಸತಕ್ಕದ್ದು.

[10+13 = 23]

# ಮತಾಂತರಿತರ ವಿವಾಹ ವಿಘಟನ ಅಧಿನಿಯಮ, 1866

**(1866ರ ಅಧಿನಿಯಮ ಸಂಖ್ಯೆ 21)**

[2ನೇ ಏಪ್ರಿಲ್, 1866]

ಕ್ರೈಸ್ತ ಧರ್ಮಕ್ಕೆ ಮತಾಂತರವಾದವರ ವಿವಾಹಗಳ ವಿಘಟನೆಯನ್ನು ಕೆಲವು ಸಂದರ್ಭಗಳಲ್ಲಿ ಕಾನೂನು ಸಮ್ಮತಗೊಳಿಸುವ ಅಧಿನಿಯಮ.

ಪ್ರಸ್ತಾವನೆ.– ಕ್ರೈಸ್ತ ಧರ್ಮಕ್ಕೆ ಮತಾಂತರವಾದವರು ತಮ್ಮ ಪತ್ನಿಯರಿಂದ ಅಥವಾ ಪತಿಯರಿಂದ ಧಾರ್ಮಿಕ ಕಾರಣಗಳಿಂದಾಗಿ ತ್ಯಜಿಸಲ್ಪಟ್ಟಿದ್ದರಿಂದ ಅಥವಾ ನಿರಾಕರಿಸಲ್ಪಟ್ಟಿದ್ದರಿಂದ ಕೆಲವು ಸಂದರ್ಭಗಳಲ್ಲಿ ಆಗಿರುವ ವಿವಾಹಗಳ ವಿಘಟನೆಯನ್ನು ಕಾನೂನು ಸಮ್ಮತಗೊಳಿಸುವುದು ವಿಹಿತವಾಗಿರುವುದರಿಂದ; ಈ ಕೆಳಕಂಡಂತೆ ಅಧಿನಿಯಮಿಸಲಾಗಿದೆ:–

1. **ಚಿಕ್ಕ ಹೆಸರು.**– ಈ ಅಧಿನಿಯಮವನ್ನು ಮತಾಂತರಿತರ ವಿವಾಹ ವಿಘಟನ ಅಧಿನಿಯಮ, 1866 ಎಂದು ಕರೆಯತಕ್ಕದ್ದು.

2. [**ಅಧಿನಿಯಮದ ಪ್ರಾರಂಭ**] ನಿರಸನಗೊಳಿಸುವ ಅಧಿನಿಯಮ, 1874 (1874ರ 16)ರ 1ನೇ ಪ್ರಕರಣದ ಮತ್ತು 1ನೇ ಅನುಸೂಚಿಯ ಮೂಲಕ ನಿರಸನಗೊಳಿಸಲಾಗಿದೆ.

3. **ಅರ್ಥವಿವರಣಾ ಖಂಡ.**– ಈ ಅಧಿನಿಯಮದಲ್ಲಿ, –

**"ಪತಿ"**.– "ಪತಿ" ಎಂದರೆ ಭಾರತದಲ್ಲಿ ವಾಸಿಸುತ್ತಿರುವ ಹದಿನಾರು ವರ್ಷ ವಯಸ್ಸು ಪೂರ್ತಿಯಾಗಿರುವ ವಿವಾಹಿತ ಪುರುಷ ಮತ್ತು ಅವನು ಕ್ರೈಸ್ತ, ಮಹಮದೀಯ ಅಥವಾ ಯಹೂದ್ಯ ಆಗಿರತಕ್ಕದ್ದಲ್ಲ;

**"ಪತ್ನಿ"**.– "ಪತ್ನಿ" ಎಂದರೆ, ಭಾರತದಲ್ಲಿ ವಾಸಿಸುತ್ತಿರುವ ಹದಿಮೂರು ವರ್ಷ ವಯಸ್ಸು ಪೂರ್ತಿಯಾಗಿರುವ ವಿವಾಹಿತ ಸ್ತ್ರೀ ಮತ್ತು ಅವಳು ಕ್ರೈಸ್ತಳು, ಮಹಮದೀಯಳು ಅಥವಾ ಯಹೂದ್ಯಳು ಆಗಿರತಕ್ಕದ್ದಲ್ಲ;

**"ಮತ ಸಂಬಂಧಿ ಕಾನೂನು".–** "ಮತ ಸಂಬಂಧಿ ಕಾನೂನು" ಎಂದರೆ ಕ್ರೈಸ್ತರು, ಮಹಮದೀಯರು ಮತ್ತು ಯಹೂದ್ಯರನ್ನು ಹೊರತುಪಡಿಸಿ, ಭಾರತದಲ್ಲಿ ವಾಸಿಸುತ್ತಿರುವ ಯಾರೇ ವ್ಯಕ್ತಿಗಳ, ಕಾನೂನು ಬಲವನ್ನು ಹೊಂದಿರುವ ಯಾವುದೇ ಕಾನೂನು ಅಥವಾ ರೂಢಿ ಎಂದು ಅರ್ಥ.

**"ತಿಂಗಳು" ಮತ್ತು "ವರ್ಷ".–** "ತಿಂಗಳು" ಮತ್ತು "ವರ್ಷ" ಎಂದರೆ, ಬ್ರಿಟಿಷ್ ಕ್ಯಾಲೆಂಡರಿಗನುಸಾರವಾಗಿ, ಅನುಕ್ರಮವಾಗಿ ತಿಂಗಳು ಮತ್ತು ವರ್ಷ.

**4. ತನ್ನ ಪತ್ನಿಯಿಂದ ತ್ಯಜಿಸಲ್ಪಟ್ಟ ಮತಾಂತರಿತನು ದಾಂಪತ್ಯ ಸಂಗಕ್ಕಾಗಿ ಯಾವಾಗ ದಾವೆಯನ್ನು ಹೂಡಬಹುದು.–** ಪತಿಯು ಕ್ರೈಸ್ತ ಧರ್ಮಕ್ಕೆ ಮತಾಂತರ ಹೊಂದಿದರೆ ಮತ್ತು ಅಂಥ ಮತಾಂತರದ ಪರಿಣಾಮವಾಗಿ ಅವನ ಪತ್ನಿಯು ನಿರಂತರವಾಗಿ ಆರು ತಿಂಗಳ ಅವಧಿಯವರೆಗೆ ಅವನನ್ನು ತ್ಯಜಿಸಿದರೆ ಅಥವಾ ನಿರಾಕರಿಸಿದರೆ, ಅವನು ದಾಂಪತ್ಯ ಸಂಗಕ್ಕಾಗಿ ಅವಳ ಮೇಲೆ ದಾವೆಯನ್ನು ಹೂಡಬಹುದು.

**5. ತನ್ನ ಪತಿಯಿಂದ ತ್ಯಜಿಸಲ್ಪಟ್ಟ ಮತಾಂತರಿತಳು ಯಾವಾಗ ದಾವೆಯನ್ನು ಹೂಡಬಹುದು.–** ಪತ್ನಿಯು ಕ್ರೈಸ್ತ ಧರ್ಮಕ್ಕೆ ಮತಾಂತರ ಹೊಂದಿದರೆ ಮತ್ತು ಅಂಥ ಮತಾಂತರದ ಪರಿಣಾಮವಾಗಿ ಅವಳ ಪತಿಯು ನಿರಂತರವಾಗಿ ಆರು ತಿಂಗಳ ಅವಧಿಯವರೆಗೆ ಅವಳನ್ನು ತ್ಯಜಿಸಿದರೆ ಅಥವಾ ನಿರಾಕರಿಸಿದರೆ, ಅವಳು ದಾಂಪತ್ಯ ಸಂಗಕ್ಕಾಗಿ ಅವನ ಮೇಲೆ ದಾವೆಯನ್ನು ಹೂಡಬಹುದು.

**6. ಯಾವ ನ್ಯಾಯಾಲಯದಲ್ಲಿ ದಾವೆಯನ್ನು ಹೂಡತಕ್ಕದ್ದು.–** ಅಂಥ ದಾವೆಯ ಪ್ರಾರಂಭದ ಕಾಲದಲ್ಲಿ, ಯಾವುದೇ ಉಚ್ಚ ನ್ಯಾಯಾಲಯದ ಸಾಮಾನ್ಯ ಅಸಲು ಸಿವಿಲ್ ಅಧಿಕಾರ ವ್ಯಾಪ್ತಿಯಿರುವ ಸ್ಥಳೀಯ ಪರಿಮಿತಿಗಳೊಳಗೆ ಪ್ರತ್ಯರ್ಜಿದಾರನು/ಳು ವಾಸಿಸುತ್ತಿದ್ದರೆ ಅಂಥ ನ್ಯಾಯಾಲಯದಲ್ಲಿ ದಾವೆಯನ್ನು ಪ್ರಾರಂಭಿಸತಕ್ಕದ್ದು; ಇಲ್ಲವಾದರೆ, ದಾವೆಯ ಪ್ರಾರಂಭದ ಕಾಲದಲ್ಲಿ ಪ್ರತಿವಾದಿಯು ವಾಸಿಸುತ್ತಿರುವ ಜಿಲ್ಲೆಯ ಅಸಲು ಅಧಿಕಾರ ವ್ಯಾಪ್ತಿಯಿರುವ ಪ್ರಧಾನ ಸಿವಿಲ್ ನ್ಯಾಯಾಲಯದಲ್ಲಿ ಅದನ್ನು ಪ್ರಾರಂಭಿಸತಕ್ಕದ್ದು.

**7. ಸತ್ಯಾಪನೆ ಮಾಡಿದ ಅರ್ಜಿಯ ಮೂಲಕ ದಾವೆಯನ್ನು ಪ್ರಾರಂಭಿಸತಕ್ಕದ್ದು.–** ಈ ಅಧಿನಿಯಮದ ಮೊದಲನೆಯ ಅನುಸೂಚಿಯಲ್ಲಿರುವ ನಮೂನೆಯಲ್ಲಿ ಅಥವಾ ಮೊಕದ್ದಮೆಯ ಸನ್ನಿವೇಶಗಳು ಅವಕಾಶ ಕೊಡಬಹುದಾದಂಥ ಅದಕ್ಕೆ ಹತ್ತಿರವಾಗಿರುವ ನಮೂನೆಯಲ್ಲಿನ ಅರ್ಜಿಯ ಮೂಲಕ ದಾವೆಯನ್ನು ಪ್ರಾರಂಭಿಸತಕ್ಕದ್ದು.

ವಾದಪತ್ರಗಳ ಸತ್ಯಾಪನೆಗಾಗಿ ಕಾನೂನು ಮೂಲಕ ಅಗತ್ಯಪಡಿಸಿದ ರೀತಿಯಲ್ಲಿ ಅರ್ಜಿದಾರನು/ಳು ಅರ್ಜಿಯಲ್ಲಿ ಮಾಡಲಾದ ಹೇಳಿಕೆಗಳ ಸತ್ಯಾಪನೆ ಮಾಡತಕ್ಕದ್ದು ಮತ್ತು ನ್ಯಾಯಾಲಯದ ಅನುಮತಿ ಪಡೆದು ಆ ಅರ್ಜಿಯನ್ನು ತಿದ್ದುಪಡಿ ಮಾಡಬಹುದು.

**8. ಅರ್ಜಿಯನ್ನು ಜಾರಿ ಮಾಡಿದ ಮೇಲೆ ಪ್ರತ್ಯರ್ಜಿದಾರನಿಗೆ/ಳಿಗೆ ನ್ಯಾಯಾಲಯದ ಕರೆಯಾಜ್ಞೆ.–** ಅರ್ಜಿಯ ಒಂದು ಪ್ರತಿಯನ್ನು ಪ್ರತ್ಯರ್ಜಿದಾರನಿಗೆ/ಳಿಗೆ ಜಾರಿ ಮಾಡತಕ್ಕದ್ದು ಮತ್ತು ತದನಂತರ ನ್ಯಾಯಾಲಯದ ಮೊಹರಿರುವ ಮತ್ತು ನ್ಯಾಯಾಧೀಶನ ಸಹಿಯಿರುವ ಕರೆಯಾಜ್ಞೆಯನ್ನು ನ್ಯಾಯಾಲಯವು ಹೊರಡಿಸತಕ್ಕದ್ದು.

**9. ಕರೆಯಾಜ್ಞೆಯ ನಮೂನೆ.–** ಸಾಮಾನ್ಯ ಮೊಕದ್ದಮೆಗಳಲ್ಲಿ ಕರೆಯಾಜ್ಞೆಯು ಈ ಅಧಿನಿಯಮದ ಎರಡನೆಯ ಅನುಸೂಚಿಯಲ್ಲಿರುವ, ಅಥವಾ ಮೊಕದ್ದಮೆಯ ಸನ್ನಿವೇಶಗಳು ಅವಕಾಶ ಮಾಡಿಕೊಡಬಹುದಾದಂಥ, ಅದಕ್ಕೆ ಆದಷ್ಟು ಹತ್ತಿರವಾಗಿರುವ ನಮೂನೆಯಲ್ಲಿ ಇರತಕ್ಕದ್ದು.

ಆದರೆ ನ್ಯಾಯಾಲಯದಲ್ಲಿ ಖುದ್ದಾಗಿ ಹಾಜರಾಗುವುದರಿಂದ ಪ್ರತ್ಯರ್ಜಿದಾರನು/ಳು ಕಾನೂನು ಮೂಲಕ ವಿನಾಯಿತಿ ಹೊಂದಿರುವಲ್ಲಿ ಅಥವಾ ನ್ಯಾಯಾಧೀಶನು ಹಾಗೆ ನಿರ್ದೇಶಿಸಿದಲ್ಲಿ, ಕರೆಯಾಜ್ಞೆಯು ಈ ಅಧಿನಿಯಮದ ಮೂರನೇ ಅನುಸೂಚಿಯಲ್ಲಿರುವ, ಅಥವಾ ಮೊಕದ್ದಮೆಯ ಸನ್ನಿವೇಶಗಳು ಅವಕಾಶ ಮಾಡಿಕೊಡಬಹುದಾದಂಥ, ಅದಕ್ಕೆ ಆದಷ್ಟು ಹತ್ತಿರವಾಗಿರುವ ನಮೂನೆಯಲ್ಲಿ ಇರತಕ್ಕದ್ದು.

**10. ಕರೆಯಾಜ್ಞೆಯ ಜಾರಿ.–** ನ್ಯಾಯಾಲಯದ ಮುದ್ರೆಯಿಂದ ಮೊಹರು ಮಾಡಿದ ಕರೆಯಾಜ್ಞೆಯ ಒಂದು ಪ್ರತಿಯನ್ನು ಪ್ರತ್ಯರ್ಜಿದಾರನಿಗೆ/ಳಿಗೆ ಜಾರಿ ಮಾಡತಕ್ಕದ್ದು ಮತ್ತು ಸಮನುಗಳ ಜಾರಿಗೆ ಮತ್ತು ಹಿಂಬರಹಕ್ಕೆ ಸಿವಿಲ್ ಪ್ರಕ್ರಿಯಾ ಸಂಹಿತೆಯ (1908ರ 5) ಉಪಬಂಧಗಳು ಯಥೋಚಿತ ವ್ಯತ್ಯಾಸಗಳೊಂದಿಗೆ, ಈ ಅಧಿನಿಯಮದ ಮೇರೆಗಿನ ಕರೆಯಾಜ್ಞೆಗಳಿಗೆ ಅನ್ವಯಿಸತಕ್ಕದ್ದು.

**11. ಕರೆಯಾಜ್ಞೆಯನ್ನು ಪಾಲಿಸದ ಪ್ರತ್ಯರ್ಜಿದಾರನಿಗೆ/ಳಿಗೆ ದಂಡನೆ.–** ಪ್ರತ್ಯರ್ಜಿದಾರನು/ಳು ಅಂಥ ಕರೆಯಾಜ್ಞೆಯನ್ನು ಪಾಲಿಸದಿದ್ದರೆ ಮತ್ತು ಈ ಅಧಿನಿಯಮದ ಉಪಬಂಧಗಳ ಮೇರೆಗೆ ಅವಳ ಅಥವಾ ಅವನ ಮೇಲೆ ಹೊರಿಸಲಾದ ಇತರ ಪ್ರತಿಯೊಂದು ಅಗತ್ಯತೆಯನ್ನು ಪಾಲಿಸದಿದ್ದರೆ, ಅವಳು ಅಥವಾ ಅವನು ಭಾರತ ದಂಡ ಸಂಹಿತೆಯ (1860ರ 45) 174ನೇ ಪ್ರಕರಣದ ಮೇರೆಗೆ ದಂಡನೆಗೆ ಗುರಿಯಾಗತಕ್ಕದ್ದು.

**12. ಅರ್ಜಿದಾರನು/ಳು ಹಾಜರಾದಾಗ ರುಜುವಾತು ಪಡಿಸಬೇಕಾದ ಅಂಶಗಳು.**– ಕರೆಯಾಜ್ಞೆಯಲ್ಲಿ ನಿಗದಿಪಡಿಸಲಾಗಿರುವ ದಿನದಂದು ಅರ್ಜಿದಾರನು/ಳು ನ್ಯಾಯಾಲಯದಲ್ಲಿ ಹಾಜರಾಗತಕ್ಕದ್ದು ಮತ್ತು ಈ ಕೆಳಕಂಡ ಅಂಶಗಳನ್ನು ಎಂದರೆ:–

(1) ಪಕ್ಷಕಾರರ ಗುರುತು;

(2) ಅರ್ಜಿದಾರನ/ಳ ಮತ್ತು ಪ್ರತ್ಯರ್ಜಿದಾರನ/ಳ ನಡುವಿನ ವಿವಾಹ;

(3) ದಾವೆಯ ಪಕ್ಷಕಾರನಾಗಿರುವ ಪುರುಷನಿಗೆ ಹದಿನಾರು ವರ್ಷ ವಯಸ್ಸು ಪೂರ್ತಿಯಾಗಿದೆ ಮತ್ತು ದಾವೆಯ ಪಕ್ಷಕಾರಳಾಗಿರುವ ಮಹಿಳೆಗೆ ಹದಿಮೂರು ವರ್ಷ ವಯಸ್ಸು ಪೂರ್ತಿಯಾಗಿದೆ;

(4) ಪ್ರತ್ಯರ್ಜಿದಾರನು/ಳು ಅರ್ಜಿದಾರನನ್ನು/ಳನ್ನು ತ್ಯಜಿಸಿರುವುದು ಅಥವಾ ನಿರಾಕರಿಸಿರುವುದು;

(5) ಅಂಥ ತ್ಯಜಿಸಿರುವುದು ಅಥವಾ ನಿರಾಕರಿಸಿರುವುದು ಅರ್ಜಿದಾರನು/ಳು ಮತಾಂತರ ಹೊಂದಿದ ಪರಿಣಾಮದಿಂದ ಆದುದು;

(6) ಮತ್ತು ದಾವೆಯ ಪ್ರಾರಂಭದ ನಿಕಟಪೂರ್ವದ ಆರು ತಿಂಗಳವರೆಗೆ ಹಾಗೆ ತ್ಯಜಿಸಿರುವುದು ಅಥವಾ ನಿರಾಕರಿಸಿರುವುದು ಮುಂದುರೆದಿತ್ತು

–ಎಂಬುದನ್ನು ರುಜುವಾತುಪಡಿಸತಕ್ಕದ್ದು.

**13. ಪ್ರತ್ಯರ್ಜಿದಾರನನ್ನು/ಳನ್ನು ಮೊದಲ ಬಾರಿ ಪ್ರಶ್ನಿಸುವುದು.**– ನ್ಯಾಯಾಧೀಶನಿಗೆ ಸಮಾಧಾನವಾಗುವಂತೆ ಈ ಅಂಶಗಳನ್ನು ರುಜುವಾತುಪಡಿಸಿದರೆ, ತದನಂತರ ಅವನು ಅಥವಾ ಅವಳು ಅರ್ಜಿದಾರನ/ಳ ಸಹವಾಸದಲ್ಲಿ ಇರಲು ನಿರಾಕರಿಸುವನೆ/ಳೆ ಎಂದು ಮತ್ತು ಹಾಗಿದ್ದರೆ, ಅಂಥ ನಿರಾಕರಣೆಯ ಕಾರಣವೇನು ಎಂದು ಪ್ರತ್ಯರ್ಜಿದಾರನನ್ನು/ಳನ್ನು ಕೇಳತಕ್ಕದ್ದು.

ಸಾಮಾನ್ಯ ಮೊಕದ್ದಮೆಗಳಲ್ಲಿ ಈ ಅಧಿನಿಯಮದ ಮೂಲಕ ನಿಯಮಿಸಲಾದ ಅಂಥ ಪ್ರಶ್ನೆಯನ್ನು ಮತ್ತು ಇತರ ಪ್ರತಿಯೊಂದು ಪ್ರಶ್ನೆಯನ್ನೂ ನ್ಯಾಯಾಧೀಶನು ಮಾಡತಕ್ಕದ್ದು, ಆದರೆ ನ್ಯಾಯಾಲಯದಲ್ಲಿ ಖುದ್ದಾಗಿ ಹಾಜರಾಗುವುದರಿಂದ ಪ್ರತ್ಯರ್ಜಿದಾರನು/ಳು ಕಾನೂನು ಮೂಲಕ ವಿನಾಯಿತಿ ಪಡೆದಿರುವಾಗ ಅಥವಾ ನ್ಯಾಯಾಧೀಶನು ತನ್ನ ವಿವೇಚನಾನುಸಾರವಾಗಿ, ಹಾಗೆ ಹಾಜರಾಗುವುದರಿಂದ ಪ್ರತ್ಯರ್ಜಿದಾರನಿಗೆ/ಳಿಗೆ ವಿನಾಯಿತಿ ನೀಡಿರುವಾಗ, ಈ ಮುಂದೆ ನಮೂದಿಸಲಾಗಿರುವಂತೆ ಕಮೀಷನ್ನಿನ ಮೇರೆಗೆ ಕಾರ್ಯ ನಿರ್ವಹಿಸುತ್ತಿರುವ ಕಮೀಷನರು ಪ್ರಶ್ನೆ ಮಾಡತಕ್ಕದ್ದು.

**14. ನ್ಯಾಯಾಧೀಶನು ಪ್ರಶ್ನೆಗಳನ್ನು ಬಹಿರಂಗವಾಗಿ ಅಥವಾ ಖಾಸಗಿಯಾಗಿ ಕೇಳಬಹುದು.**– ಈ ಅಧಿನಿಯಮದಲ್ಲಿ ನಮೂದಿಸಲಾದ ಮತ್ತು ನ್ಯಾಯಾಧೀಶನು ಕೇಳಿದ ಪ್ರತಿಯೊಂದು ಪ್ರಶ್ನೆಯನ್ನು,

ನ್ಯಾಯಾಧೀಶನ ವಿವೇಚನಾನುಸಾರ ಬಹಿರಂಗ ನ್ಯಾಯಾಲಯದಲ್ಲಿ ಅಥವಾ ತನ್ನ ಖಾಸಗಿ ಕೊಠಡಿಯಲ್ಲಿ ನ್ಯಾಯಾಧೀಶನು ಕೇಳಬಹುದು.

ಅಂಥ ಯಾವುದೇ ಪ್ರಶ್ನೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಕೇಳಿದರೆ, ಅದು ನಡೆಯುವಷ್ಟು ಕಾಲದವರೆಗೆ ಯಾರನ್ನು ಹೊರಗಿಡುವುದು ಸೂಕ್ತವೆಂದು ತಾನು ಆಲೋಚಿಸುತ್ತಾನೋ ಅಂಥ ಎಲ್ಲ ವ್ಯಕ್ತಿಗಳನ್ನು ನ್ಯಾಯಾಧೀಶನು ನ್ಯಾಯಾಲಯದಿಂದ ಹೊರಗಿಡತಕ್ಕದ್ದು.

**15. ಅರ್ಜಿದಾರನ ಸಹವಾಸದಲ್ಲಿರಲು ಪ್ರತ್ಯರ್ಜಿದಾರಳು ನಿರಾಕರಿಸಿದಾಗ ಪ್ರಕ್ರಿಯೆ. ಒಂದು ವರ್ಷಕ್ಕೆ ಮುಂದೂಡುವುದು. ಸಂದರ್ಶನ.–** ಪ್ರತ್ಯರ್ಜಿದಾರ ವ್ಯಕ್ತಿಯು ಮಹಿಳೆಯಾಗಿದ್ದರೆ, ಮತ್ತು ಸಂದರ್ಭಾನುಸಾರ, ನ್ಯಾಯಾಧೀಶನ ಅಥವಾ ಕಮೀಷನರರ ಪ್ರಶ್ನೆಗಳಿಗೆ ಉತ್ತರ ಹೇಳುವಲ್ಲಿ, ಅರ್ಜಿದಾರನ ಸಹವಾಸದಲ್ಲಿರಲು ನಿರಾಕರಿಸಿದರೆ ಪ್ರತ್ಯರ್ಜಿದಾರಳ ಉತ್ತರಗಳನ್ನು ಮತ್ತು ಅರ್ಜಿದಾರನು ರುಜುವಾತುಪಡಿಸಿರಬಹುದಾದ ಸಂಗತಿಗಳನ್ನು ನ್ಯಾಯಾಧೀಶನು ಪರ್ಯಾಲೋಚಿಸಿ, ಅಂಥ ನಿರಾಕರಣೆಗೆ ಅರ್ಜಿದಾರನ ಮತಾಂತರವೇ ಕಾರಣವೆಂದು ಅಭಿಪ್ರಾಯಪಟ್ಟರೆ, ಮೊಕದ್ದಮೆಯನ್ನು ಒಂದು ವರ್ಷದವರೆಗೆ ಮುಂದಕ್ಕೆ ಹಾಕಿ ಮತ್ತು ಮಧ್ಯಕಾಲದಲ್ಲಿ ಪ್ರತ್ಯರ್ಜಿದಾರಳು ಅಂಥ ನಿರಾಕರಣೆಯನ್ನು ಸ್ವತಂತ್ರವಾಗಿ ಮತ್ತು ಸ್ವಯಂಪ್ರೇರಿತಳಾಗಿ ಪಟ್ಟುಹಿಡಿಯುವಳೇ ಅಥವಾ ಇಲ್ಲವೇ ಎಂಬುದನ್ನು ಖಚಿತಪಡಿಸಿಕೊಳ್ಳುವ ದೃಷ್ಟಿಯಿಂದ ತಾನು ಅನುಕೂಲಕರವೆಂದು ಭಾವಿಸುವಂಥ ಸ್ಥಳದಲ್ಲಿ ಮತ್ತು ಸಮಯದಲ್ಲಿ ನ್ಯಾಯಾಧೀಶನು ನಿರ್ದೇಶಿಸತಕ್ಕ ಅವಧಿಯವರೆಗೆ, ಮತ್ತು ನ್ಯಾಯಾಧೀಶನು ಆಯ್ಕೆ ಮಾಡತಕ್ಕ ವ್ಯಕ್ತಿಯ ಅಥವಾ ವ್ಯಕ್ತಿಗಳ (ಮಹಿಳೆ ಅಥವಾ ಮಹಿಳೆಯರಾಗಿರಬಹುದು) ಸಮ್ಮುಖದಲ್ಲಿ ಪಕ್ಷಕಾರರು ಸಂದರ್ಶಿಸುವಂತೆ ನಿರ್ದೇಶಿಸುವ ಆದೇಶವನ್ನು ಮಾಡತಕ್ಕದ್ದು.

**16. ಮುಂದೂಡುವಿಕೆಯು ಮುಕ್ತಾಯವಾದ ತುರುವಾಯ ಪ್ರಕ್ರಿಯೆ. ಪ್ರತ್ಯರ್ಜಿದಾರಳಿಗೆ ಪ್ರಶ್ನೆಗಳು.–** ಅಂಥ ಮುಂದೂಡುವಿಕೆಯು ಮುಕ್ತಾಯವಾದಾಗ ಅರ್ಜಿದಾರನು ಪುನಃ ನ್ಯಾಯಾಲಯಕ್ಕೆ ಹಾಜರಾಗತಕ್ಕದ್ದು ಮತ್ತು ಈ ಹಿಂದೆ ಉಲ್ಲೇಖಿಸಿದ ಅವಧಿಯವರೆಗೂ ಸದರಿ ತ್ಯಜನೆವು ಅಥವಾ ನಿರಾಕರಣೆಯು ಮುಂದುವರೆದಿದೆ ಎಂದು ರುಜುವಾತುಪಡಿಸತಕ್ಕದ್ದು; ಮತ್ತು ಈ ಅಧಿನಿಯಮದ 12ನೇ ಪ್ರಕರಣದಲ್ಲಿ ಮತ್ತು ಈ ಪ್ರಕರಣದಲ್ಲಿ ನಮೂದಿಸಲಾಗಿರುವ ಅಂಶಗಳನ್ನು ನ್ಯಾಯಾಧೀಶನಿಗೆ ಮನದಟ್ಟಾಗುವಂತೆ ರುಜುವಾತುಪಡಿಸಿದರೆ, ಮತ್ತು ಸಂದರ್ಭಾನುಸಾರ ನ್ಯಾಯಾಧೀಶನು ಅಥವಾ ಕಮೀಷನರರು ಪ್ರತ್ಯರ್ಜಿದಾರಳನ್ನು ಪ್ರಶ್ನಿಸಿದಾಗ ಅರ್ಜಿದಾರನ ಸಹವಾಸದಲ್ಲಿರಲು ಪುನಃ ನಿರಾಕರಿಸಿದರೆ, ಪ್ರತ್ಯರ್ಜಿದಾರಳು ಅರ್ಜಿದಾರನನ್ನು ಅಂತಿಮವಾಗಿ ತ್ಯಜಿಸಿದ್ದಾಳೆಂದು ಅಥವಾ ನಿರಾಕರಿಸಿದ್ದಾಳೆಂದು ತಿಳಿಯತಕ್ಕದ್ದು.

**ಡಿಕ್ರಿ.–** ಮತ್ತು ನ್ಯಾಯಾಧೀಶನು, ತನ್ನ ಸಹಿಯಿರುವ ಮತ್ತು ತನ್ನ ನ್ಯಾಯಾಲಯದ ಮೊಹರಿನಿಂದ ಹಾಕಿದ ಡಿಕ್ರಿಯ ಮೂಲಕ ಪಕ್ಷಕಾರರ ನಡುವಿನ ವಿವಾಹವು ವಿಘಟಿತವಾಗಿದೆಯೆಂದು ಘೋಷಿಸತಕ್ಕದ್ದು.

**17. ಅರ್ಜಿದಾರಳ ಮತಾಂತರದ ಕಾರಣಗಳ ಮೇಲೆ ಅವಳ ಸಹವಾಸದಲ್ಲಿರಲು ಪ್ರತ್ಯರ್ಜಿದಾರನು ನಿರಾಕರಿಸಿದ ಸಂದರ್ಭದಲ್ಲಿ ಡಿಕ್ರಿ.–** ಪ್ರತ್ಯರ್ಜಿದಾರನು ಪುರುಷನಾಗಿದ್ದಲ್ಲಿ, ಮತ್ತು ಸಂದರ್ಭಾನುಸಾರ ನ್ಯಾಯಾಧೀಶ ಅಥವಾ ಕಮೀಷನರ್‌ರ ಪರಿಪ್ರಶ್ನೆಗಳಿಗೆ ಉತ್ತರ ಹೇಳುವಲ್ಲಿ, ಅರ್ಜಿದಾರಳ ಸಹವಾಸದಲ್ಲಿರಲು ಅವನು ನಿರಾಕರಿಸಿದರೆ, ಪ್ರತ್ಯರ್ಜಿದಾರನ ಉತ್ತರಗಳನ್ನು ಮತ್ತು ಅರ್ಜಿದಾರಳು ರುಜುವಾತುಪಡಿಸಿರಬಹುದಾದ ಸಂಗತಿಗಳನ್ನು ನ್ಯಾಯಾಧೀಶನು ಪರ್ಯಾಲೋಚಿಸಿ, ಅಂಥ ನಿರಾಕರಣೆಗೆ ಅರ್ಜಿದಾರಳ ಮತಾಂತರವೇ ಕಾರಣವೆಂದು ಅಭಿಪ್ರಾಯಪಟ್ಟರೆ, ಮೊಕದ್ದಮೆಯನ್ನು ಒಂದು ವರ್ಷದವರೆಗೆ ಮುಂದಕ್ಕೆ ಹಾಕತಕ್ಕದ್ದು.

ಅಂಥ ಮುಂದೂಡುವಿಕೆಯು ಮುಕ್ತಾಯವಾದಾಗ, ಅರ್ಜಿದಾರಳು ಪುನಃ ನ್ಯಾಯಾಲಯದಲ್ಲಿ ಹಾಜರಾಗತಕ್ಕದ್ದು. ಮತ್ತು ಸಂದರ್ಭಾನುಸಾರ ನ್ಯಾಯಾಧೀಶನು ಅಥವಾ ಕಮೀಷನರರು ಪ್ರತ್ಯರ್ಜಿದಾರನನ್ನು ಪ್ರಶ್ನಿಸಿದಾಗ ಅರ್ಜಿದಾರಳ ಸಹವಾಸದಲ್ಲಿರಲು ಅವನು ಪುನಃ ನಿರಾಕರಿಸಿದರೆ, ಮೇಲೆ ಹೇಳಿದಂಥ ಡಿಕ್ರಿಯನ್ನು ನ್ಯಾಯಾಧೀಶನು ಅಂತಿಮವಾಗಿ ಮಾಡತಕ್ಕದ್ದು:

**ಪರಂತುಕ.–** ಪರಂತು, ಅರ್ಜಿದಾರಳು ಹಾಗೆ ಇಚ್ಛಿಸಿದರೆ, (ಆದರೆ ಅನ್ಯಥಾ ಅಲ್ಲ) ದಾವೆಯಲ್ಲಿನ ವ್ಯವಹರಣೆಗಳು, ಪ್ರತ್ಯಾರ್ಜಿದಾರಳ ಸಂದರ್ಭದಲ್ಲಿರುವಂತೆಯೇ ಯಥೋಚಿತ ವ್ಯತ್ಯಾಸಗಳೊಡನೆ ಇರತಕ್ಕದ್ದು.

**18. ವಿವಾಹದ ಕಾಲದಲ್ಲಿ ವಧೂವರರಲ್ಲಿ ಯಾರಾದರೂ ಹರೆಯದವರಾಗಿರದಿದ್ದು ನಿಷೇಕ ಪ್ರಸ್ತ ಆಗದಿದ್ದ ಸಂದರ್ಭದಲ್ಲಿ ನಿಷೇಕ ಪ್ರಸ್ತ ಮಾಡಿಕೊಳ್ಳಲು ಪ್ರತ್ಯರ್ಜಿದಾರನು/ಳು ನಿರಾಕರಿಸಿದರೆ ಡಿಕ್ರಿ.–** ಇದರಲ್ಲಿ ಈ ಹಿಂದೆ ಏನೇ ಇದ್ದರೂ, ಉಭಯ ಪಕ್ಷಕಾರರು ಅಥವಾ ಅವರಲ್ಲಿ ಯಾರಾದರೂ ಒಬ್ಬರು ಅವರ ವಿವಾಹದ ದಿನಾಂಕದಂದು ಹರೆಯದವರಾಗಿರಲಿಲ್ಲವೆಂದು ಮತ್ತು ಅಂಥ ವಿವಾಹದ ನಿಷೇಕ ಪ್ರಸ್ತವಾಗಿಲ್ಲವೆಂದು ದಾವೆಯ ಯಾವುದೇ ಹಂತದಲ್ಲಿ ಕಂಡುಬಂದರೆ, ಮತ್ತು ಈ ಅಧಿನಿಯಮದ 13ನೇ ಪ್ರಕರಣಕ್ಕೆ ಅನುಸಾರವಾಗಿ ಮಾಡಿದ ಪ್ರಶ್ನೆಗಳಿಗೆ ಉತ್ತರವಾಗಿ ಪ್ರತ್ಯರ್ಜಿದಾರನು/ಳು ಅರ್ಜಿದಾರನ/ಳ ಸಹವಾಸದಲ್ಲಿರಲು ನಿರಾಕರಿಸಿದರೆ, ಮತ್ತು ಅರ್ಜಿದಾರನು/ಳು ಮತಾಂತರ ಹೊಂದಿರುವುದು ಅಂಥ ನಿರಾಕರಣೆಗೆ ಆಧಾರವೆಂದು ಆಪಾದಿಸಿದಲ್ಲಿ, ಆಮೇಲೆ ನ್ಯಾಯಾಧೀಶನು ಹಿಂದೆ ಕೊನೆಗೆ ಹೇಳಿದ ಹಾಗೆ ಡಿಕ್ರಿಯನ್ನು ಮಾಡತಕ್ಕದ್ದು.

**19. ಪುನಃ ವಿವಾಹವಾಗಲು ಪಕ್ಷಕಾರರಿಗೆ ಸ್ವಾತಂತ್ರ್ಯ.–** ವಿವಾಹವನ್ನು ವಿಘಟಿಸುವ ಯಾವುದೇ ಡಿಕ್ರಿಯನ್ನು ಈ ಅಧಿನಿಯಮದ ಉಪಬಂಧಗಳ ಮೇರೆಗೆ ಮಾಡಿರುವಾಗ, ಮರಣದಿಂದಾಗಿ ಮುಂಚಿನ ವಿವಾಹವು ವಿಘಟಿತವಾಗಿದ್ದರೆ ಹೇಗೋ ಹಾಗೆ ಸಂಬಂಧಪಟ್ಟ ಪಕ್ಷಕಾರರು ಪುನಃ ವಿವಾಹವಾಗುವುದು ಕಾನೂನುಬದ್ಧವಾಗಿರತಕ್ಕದ್ದು, ಮತ್ತು ತದ್ವಿರುದ್ಧವಾಗಿ ಯಾವುದೇ ಮತಸಂಬಂಧಿ ಕಾನೂನು ಇದ್ದರೂ, ಅಂಥ ಯಾವುದೇ ಪುನರ್ವಿವಾಹದ ಸಂತಾನವು ಕಾನೂನು ಸಮ್ಮತವಾಗಿರತಕ್ಕದ್ದು:

ಪರಂತು, ಯಾವ ವ್ಯಕ್ತಿಯ ಮುಂಚಿನ ವಿವಾಹವು ಈ ಅಧಿನಿಯಮದ ಮೇರೆಗೆ ವಿಘಟಿತವಾಗಿರಬಹುದೋ ಆ ಯಾರೇ ವ್ಯಕ್ತಿಯ ವಿವಾಹವನ್ನು ವಿಧ್ಯುಕ್ತವಾಗಿ ನೆರವೇರಿಸಲು ಯಾರೇ ಧರ್ಮಗುರುವನ್ನು ಎಂದಿಗೂ ಒತ್ತಾಯಿಸತಕ್ಕದ್ದಲ್ಲ. ಅಥವಾ ಅಂಥ ಯಾರೇ ವ್ಯಕ್ತಿಯ ವಿವಾಹವನ್ನು ವಿಧ್ಯುಕ್ತವಾಗಿ ನೆರವೇರಿಸಲು ಅವನು ನಿರಾಕರಿಸಿದ್ದಕ್ಕಾಗಿ ಯಾವುದೇ ದಾವೆಗೆ ಅಥವಾ ದಂಡನೆಗೆ ಅವನು ಗುರಿಯಾಗತಕ್ಕದ್ದಲ್ಲ.

**20. ವಿನಾಯಿತಿ ನೀಡಲಾದ ವ್ಯಕ್ತಿಗಳ ವಿಚಾರಣೆಗಾಗಿ ನ್ಯಾಯಾಧೀಶನು ಕಮೀಷನ್ ಹೊರಡಿಸಲು ಆದೇಶ ಮಾಡುವುದು.–** ಈ ಅಧಿನಿಯಮದ ಮೇರೆಗೆ ಹೂಡಲಾದ ದಾವೆಗಳಲ್ಲಿ ಮೇಲೆ ಹೇಳಿದ ಹಾಗೆ ವಿನಾಯಿತಿ ಹೊಂದಿದ ವ್ಯಕ್ತಿಗಳನ್ನು ಪ್ರಶ್ನೆ ಕೇಳುವುದರ ಮೂಲಕ ಅಥವಾ ಅನ್ಯಥಾ ವಿಚಾರಣೆ ಮಾಡುವುದಕ್ಕಾಗಿ ತಾನು ಸೂಕ್ತವೆಂದು ಆಲೋಚಿಸುವಂಥ ವ್ಯಕ್ತಿಗಳಿಗೆ ಅವರು ಪುರುಷರಾಗಿರಲಿ ಅಥವಾ ಸ್ತ್ರೀಯರಾಗಿರಲಿ ಅಥವಾ ಇಬ್ಬರಿಗೂ ಕಮೀಷನ್ ಹೊರಡಿಸಲು ನ್ಯಾಯಾಧೀಶನು ಆದೇಶಿಸತಕ್ಕದ್ದು.

ಸಿವಿಲ್ ಪ್ರಕ್ರಿಯಾ ಸಂಹಿತೆ (1908ರ 5) ಯ ಉಪಬಂಧಗಳು, ಕಾರ್ಯಸಾಧ್ಯವಾದಷ್ಟು ಮಟ್ಟಿಗೆ ಈ ಪ್ರಕರಣದ ಮೇರೆಗೆ ಹೊರಡಿಸಲಾದ ಕಮೀಷನುಗಳಿಗೆ ಅನ್ವಯಿಸತಕ್ಕದ್ದು.

**21. ಅರ್ಜಿದಾರನ/ಳ ವಿವಾಹದ ಬಗ್ಗೆ ಮತ್ತು ಮತಾಂತರದ ಪರಿಣಾಮವಾಗಿ ಆದ ತ್ಯಜನೆಯ ಅಥವಾ ನಿರಾಕರಣೆಯ ಬಗ್ಗೆ ರುಜುವಾತು.–** ಈ ಅಧಿನಿಯಮದ ಮೇರೆಗೆ ಹೂಡಲಾದ ದಾವೆಯ ಯಾವುದೇ ಹಂತದಲ್ಲಿ, ಪಕ್ಷಕಾರರ ವಿವಾಹದ ಬಗ್ಗೆ ಅವರು ಗಂಡ ಮತ್ತು ಹೆಂಡತಿಯಾಗಿ ಸಹವಾಸ ಮಾಡಿಕೊಂಡಿರುವುದೇ ಸಾಕಷ್ಟು ಪೂರ್ವಭಾವಿ ಸಾಕ್ಷ್ಯವಾಗತಕ್ಕದ್ದು ಮತ್ತು ಅರ್ಜಿದಾರನ/ಳ ಮತಾಂತರದ ಅನಂತರ ಮತ್ತು ಅದರ ಬಗ್ಗೆ ಅರ್ಜಿದಾರನಿಗೆ/ಳಿಗೆ ತಿಳಿದು ಬಂದ ನಂತರ ಅರ್ಜಿದಾರನೊಂದಿಗೆ/ಳೊಂದಿಗೆ ಸಹವಾಸಿಸಲು ಪ್ರತ್ಯರ್ಜಿದಾರನು/ಳು ನಿರಾಕರಿಸಿದ ಅಥವಾ ಸ್ವ ಇಚ್ಛೆಯಿಂದ ನಿರ್ಲಕ್ಷಿಸಿದ ಬಗೆಗಿನ ರುಜುವಾತು ಪ್ರತ್ಯರ್ಜಿದಾರನು/ಳು ಅರ್ಜಿದಾರನನ್ನು/ಳನ್ನು ತ್ಯಜಿಸಿದ ಅಥವಾ ನಿರಾಕರಿಸಿದ ಬಗೆಗೆ ಸಾಕಷ್ಟು

ಸಾಕ್ಷ್ಯವಾಗತಕ್ಕದ್ದು ಮತ್ತು ಅಂಥ ತ್ಯಜನೆಗೆ ಅಥವಾ ನಿರಾಕರಣೆಗೆ ಇತರ ಸಾಕಷ್ಟು ಕಾರಣವನ್ನು ಪ್ರತ್ಯರ್ಜಿದಾರನು/ಳು ರುಜುವಾತುಪಡಿಸಿದ ಹೊರತು, ಅಂಥ ತ್ಯಜನೆಯು ಅಥವಾ ನಿರಾಕರಣೆಯು ಅರ್ಜಿದಾರನ/ಳ ಮತಾಂತರದ ಪರಿಣಾಮವಾಗಿ ಆದುದು ಎಂಬ ಬಗೆಗೂ ಸಾಕಷ್ಟು ಸಾಕ್ಷ್ಯವಾಗತಕ್ಕದ್ದು.

22. **ಸಿವಿಲ್ ಪ್ರಕ್ರಿಯಾ ಸಂಹಿತೆಯನ್ನು ಅನ್ವಯಿಸುವುದು.**– ಸಾಕ್ಷಿದಾರರನ್ನು ಸಮನು ಮಾಡುವುದಕ್ಕೆ ಮತ್ತು ವಿಚಾರಣೆ ಮಾಡುವುದಕ್ಕೆ ಸಂಬಂಧಿಸಿದ ಸಿವಿಲ್ ಪ್ರಕ್ರಿಯಾ ಸಂಹಿತೆಯ ಉಪಬಂಧಗಳು (1908ರ 5) ಈ ಅಧಿನಿಯಮದ ಮೇರೆಗೆ ಹೂಡಲಾದ ದಾವೆಗಳಿಗೆ ಅನ್ವಯವಾಗತಕ್ಕದ್ದು.

23. **ಉಭಯ ಪಕ್ಷದವರಲ್ಲಿ ಯಾರಾದರೂ ಈ ಅಧಿನಿಯಮದಲ್ಲಿ ಅಗತ್ಯಪಡಿಸಿದ್ದಕ್ಕಿಂತ ಕಡಿಮೆ ವಯಸ್ಸಿನವರಾಗಿದ್ದರೆ ಅಥವಾ ಪಕ್ಷಕಾರರು ಸಹವಾಸದಲ್ಲಿರುತ್ತಿದ್ದರೆ ಅಥವಾ ಪ್ರತ್ಯರ್ಜಿದಾರನು/ಳು ಸಹವಾಸದಲ್ಲಿರಲು ಇಷ್ಟಪಟ್ಟರೆ ದಾವೆಯ ವಜಾ.**– ದಾವೆಯ ಯಾವುದೇ ಹಂತದಲ್ಲಿ ದಾವೆಯ ಪುರುಷ ಪಕ್ಷಕಾರನು ಹದಿನಾರು ವರ್ಷಕ್ಕಿಂತ ಕಡಿಮೆ ವಯಸ್ಸಿನವನಾಗಿದ್ದಾನೆ, ಅಥವಾ ಆಗಿದ್ದನು ಅಥವಾ ದಾವೆಯ ಸ್ತ್ರೀ ಪಕ್ಷಕಾರಳು ಅದೇ ಕಾಲಕ್ಕೆ ಹದಿಮೂರು ವರ್ಷಕ್ಕಿಂತ ಕಡಿಮೆ ವಯಸ್ಸಿನವಳಾಗಿದ್ದಾಳೆ ಅಥವಾ ಆಗಿದ್ದಳು ಅಥವಾ ಅರ್ಜಿದಾರನು/ಳು ಮತ್ತು ಪ್ರತ್ಯರ್ಜಿದಾರನು/ಳು ಗಂಡಹೆಂಡತಿಯಂತೆ ಸಹವಾಸ ಮಾಡುತ್ತಿದ್ದಾರೆ ಎಂದು ರುಜುವಾತಾದರೆ, ಅಥವಾ ಪ್ರತ್ಯರ್ಜಿದಾರನು/ಳು ಅರ್ಜಿದಾರನ/ಳ ಕೂಡ ಹಾಗೆ ಸಹವಾಸದಿಂದಿರಲು ಸಿದ್ಧನಾಗಿದ್ದಾನೆ/ಳೆ ಮತ್ತು ಇಷ್ಟಪಡುತ್ತಾನೆ/ಳೆ ಎಂದು ಹಾಜರುಪಡಿಸಿದ ಸಾಕ್ಷ್ಯದ ಮೂಲಕ ನ್ಯಾಯಾಲಯಕ್ಕೆ ಮನದಟ್ಟಾದರೆ ನ್ಯಾಯಾಲಯವು ದಾವೆಯನ್ನು ವಜಾ ಮಾಡಿ, ಹಾಗೆ ವಜಾ ಮಾಡುವುದಕ್ಕೆ ಆಧಾರವನ್ನು ನಮೂದಿಸಿ ಡಿಕ್ರಿಯನ್ನು ಮಾಡತಕ್ಕದ್ದು.

24. **ಹಾಗೆ ವಜಾ ಮಾಡಿದ ಅನಂತರ ದಾವೆಯನ್ನು ಪುನಃ ವಿಚಾರಣೆಗೆ ತೆಗೆದುಕೊಳ್ಳುವುದು.**– ಈ ಹಿಂದಿನ ಕೊನೆಯ ಪ್ರಕರಣದಲ್ಲಿ ಹೇಳಲಾದ ಯಾವುವೇ ಕಾರಣಗಳ ಮೇಲೆ ದಾವೆಯನ್ನು ವಜಾ ಮಾಡುವ ಡಿಕ್ರಿಯನ್ನು ಮಾಡಿದ ಅನಂತರ ಹನ್ನೆರಡು ತಿಂಗಳೊಳಗಾಗಿ ಯಾವುದೇ ಕಾಲದಲ್ಲಿ ಪ್ರತ್ಯರ್ಜಿದಾರನು/ಳು ಅರ್ಜಿದಾರನನ್ನು/ಳನ್ನು ಅವನು, ಅಥವಾ ಅವಳು ಮತಾಂತರ ಹೊಂದಿದ ಕಾರಣದ ಮೇಲೆ ಮತ್ತೆ ತ್ಯಜಿಸಿದರೆ ಅಥವಾ ನಿರಾಕರಿಸಿದರೆ, ಪ್ರತ್ಯರ್ಜಿದಾರನನ್ನು/ಳನ್ನು ಸಮನು ಮಾಡುವುದರ ಮೂಲಕ ದಾವೆಯನ್ನು ಪುನಃ ವಿಚಾರಣೆಗೆ ತೆಗೆದುಕೊಳ್ಳಬಹುದು, ಮತ್ತು ಈ ಮೊದಲಿನ ಡಿಕ್ರಿಯ ಮತ್ತು ಹಾಗೆ ಪುನಃ ನಿರಾಕರಿಸಿದ ಅಥವಾ ತ್ಯಜಿಸಿದ ರುಜುವಾತಿನ ಮೇಲೆ ಅಂಥ ಡಿಕ್ರಿಯನ್ನು ಮಾಡುವುದಕ್ಕೆ ನಿಕಟಪೂರ್ವದಲ್ಲಿ ಯಾವ ಹಂತವನ್ನು ದಾವೆಯು ತಲುಪಿದ್ದಿತೋ ಆ ಹಂತದಿಂದ ಅದನ್ನು ಪುನಃ ಪ್ರಾರಂಭಿಸತಕ್ಕದ್ದು ಮತ್ತು ಈ ಹಿಂದೆ ಇರುವ ಉಪಬಂಧಗಳ ಮೇರೆಗೆ ಅಗತ್ಯವಾಗಬಹುದಾದಂಥ

ರುಜುವಾತುಗಳ, ಪ್ರಶ್ನೆಗಳ, ಸಂದರ್ಶನದ ಮತ್ತು ಮುಂದೂಡುವಿಕೆಯ ಅನಂತರ, ಈ ಅಧಿನಿಯಮದ 16ನೇ ಪ್ರಕರಣದಲ್ಲಿ ನಮೂದಿಸಲಾಗಿರುವ ರೀತಿಯ ಡಿಕ್ರಿಯನ್ನು ನ್ಯಾಯಾಧೀಶನು ಮಾಡತಕ್ಕದ್ದು.

**25. ಅರ್ಜಿದಾರನ ಕ್ರೌರ್ಯವು ಅಥವಾ ಜಾರತ್ವವು ದಾವೆಯನ್ನು ಹೂಡಲು ಪ್ರತಿಬಂಧಕವಾಗತಕ್ಕದ್ದು.–** ಸಂಪೂರ್ಣವಾಗಿ ಅಥವಾ ಭಾಗಶಃ ಅರ್ಜಿದಾರನ/ಳ ಕ್ರೌರ್ಯದ ಅಥವಾ ಜಾರತ್ವದ ಪರಿಣಾಮವಾಗಿ ಪ್ರತ್ಯರ್ಜಿದಾರನು/ಳು ಅರ್ಜಿದಾರನನ್ನು/ಳನ್ನು ತ್ಯಜಿಸಿದ್ದಾನೆ/ಳೆ ಅಥವಾ ನಿರಾಕರಿಸಿದ್ದಾನೆ/ಳೆ ಎಂದು ದಾವೆಯ ಯಾವುದೇ ಹಂತದಲ್ಲಿ ರುಜುವಾತಾದರೆ, ಆ ದಾವೆಯನ್ನು ವಜಾ ಮಾಡಿ ಮತ್ತು ಹಾಗೆ ವಜಾ ಮಾಡುವುದಕ್ಕೆ ಇರುವ ಆಧಾರವನ್ನು ನಮೂದಿಸಿ ಡಿಕ್ರಿಯನ್ನು ಮಾಡತಕ್ಕದ್ದು.

ಈ ಪ್ರಕರಣದ ಮೇರೆಗೆ ವಜಾ ಮಾಡಲಾದ ದಾವೆಯನ್ನು ಪುನಃ ವಿಚಾರಣೆಗೆ ತೆಗೆದುಕೊಳ್ಳತಕ್ಕದ್ದಲ್ಲ.

**26. ಅರ್ಜಿದಾರನು ಅನೇಕ ಪತ್ನಿಯರ ಪೈಕಿ ಒಬ್ಬಳ ಸಹವಾಸದಲ್ಲಿರುವುದು ದಾವೆ ಹೂಡಲು ಪ್ರತಿಬಂಧಕವಾಗತಕ್ಕದ್ದು.–** ಅರ್ಜಿದಾರ ವ್ಯಕ್ತಿಯು ಪುರುಷನಾಗಿದ್ದರೆ, ದಾವೆಯನ್ನು ಹೂಡುವ ಕಾಲದಲ್ಲಿ ಇಬ್ಬರು ಅಥವಾ ಹೆಚ್ಚು ಪತ್ನಿಯರನ್ನು ಹೊಂದಿದ್ದರೆ, ಅವನು ಅವರೆಲ್ಲರನ್ನೂ ಪ್ರತ್ಯರ್ಜಿದಾರರನ್ನಾಗಿ ಮಾಡತಕ್ಕದ್ದು; ಮತ್ತು ಅಂಥ ಪತ್ನಿಯರಲ್ಲಿ ಯಾರಾದರೊಬ್ಬರೊಡನೆ ಪತಿ ಪತ್ನಿಯರಂತೆ ಅವನು ಸಹವಾಸದಲ್ಲಿದ್ದಾನೆಂದು ದಾವೆಯ ಯಾವುದೇ ಹಂತದಲ್ಲಿ ರುಜುವಾತಾದರೆ, ಅಥವಾ ಅಂಥ ಪತ್ನಿಯರಲ್ಲಿ ಯಾರಾದರೊಬ್ಬರು ಅವನೊಡನೆ ಹಾಗೆ ಸಹವಾಸಿಸಲು ಸಿದ್ಧಳಿದ್ದರೆ ಮತ್ತು ಇಷ್ಟವುಳ್ಳವಳಾಗಿದ್ದರೆ, ಆ ದಾವೆಯನ್ನು ವಜಾ ಮಾಡಿ ಮತ್ತು ಹಾಗೆ ಮಾಡಿದ್ದಕ್ಕೆ ಆಧಾರವನ್ನು ನಿರೂಪಿಸಿ ನ್ಯಾಯಾಲಯವು ಡಿಕ್ರಿಯನ್ನು ಮಾಡತಕ್ಕದ್ದು.

ಈ ಅಧಿನಿಯಮದ 24ನೇ ಪ್ರಕರಣದಲ್ಲಿ ಪುನಃ ವಿಚಾರಣೆಗೆ ತೆಗೆದುಕೊಳ್ಳುವುದಕ್ಕೆ ಸಂಬಂಧಿಸಿದಂತೆ ಇರುವ ಉಪಬಂಧಗಳು ಈ ಪ್ರಕರಣದ ಮೇರೆಗೆ ವಜಾ ಮಾಡಲಾದ ದಾವೆಗೆ ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯಿಸತಕ್ಕದ್ದು.

**27. ವಿವಾಹ ವಿಘಟನೆಯು ಮಕ್ಕಳ ಸ್ಥಾನಮಾನಕ್ಕೆ ಅಥವಾ ಹಕ್ಕಿಗೆ ಬಾಧಕವಾಗತಕ್ಕದ್ದಲ್ಲ.–** ಈ ಅಧಿನಿಯಮದ ಉಪಬಂಧಗಳ ಮೇರೆಗಿನ ವಿವಾಹದ ವಿಘಟನೆಯು ಪ್ರತ್ಯರ್ಜಿದಾರನ ಮಕ್ಕಳು (ಯಾರಾದರೂ ಇದ್ದರೆ) ಕಾನೂನು ಸಮ್ಮತ ಮಕ್ಕಳೆಂಬ ಅವರ ಸ್ಥಾನಮಾನವನ್ನು ಅಥವಾ ಮೇಲೆ ಹೇಳಿದ ಹಾಗೆ ವಿವಾಹವು ವಿಘಟನೆಯಾಗದಿದ್ದ ಸಂದರ್ಭದಲ್ಲಿ, ಅವರಿಗೆ ಅನ್ವಯಿಸುವ, ಮತಸಂಬಂಧಿ ಕಾನೂನಿಗೆ

ಅನುಸಾರವಾಗಿ ಅವರು ಜೀವನಾಂಶದ, ವಾರಸಿನ ಅಥವಾ ಇನ್ನಾವುದೇ ರೂಪದಲ್ಲಿ ಹೊಂದಿರಬಹುದಾಗಿದ್ದ ಯಾವುದೇ ಹಕ್ಕನ್ನು ಅಥವಾ ಹಿತಾಸಕ್ತಿಯನ್ನು ಅರ್ಜಿದಾರನು/ಳು ಕಸಿದುಕೊಳ್ಳುವಂತೆ ಮಾಡತಕ್ಕದ್ದಲ್ಲ.

**28. ಜೀವನಾಂಶವನ್ನು ಕೊಡಲು ನ್ಯಾಯಾಲಯಕ್ಕೆ ಅಧಿಕಾರ.–** ಈ ಅಧಿನಿಯಮದ ಉಪಬಂಧಗಳ ಮೇರೆಗೆ ದಾವೆಯನ್ನು ಪ್ರಾರಂಭಿಸಿದ್ದರೆ, ಮತ್ತು ಪತ್ನಿಯು ತನ್ನ ಸ್ಥಾನಮಾನಕ್ಕೆ ತಕ್ಕಂತೆ ಜೀವನವನ್ನು ನಿರ್ವಹಿಸಲು ಮತ್ತು ದಾವೆಯನ್ನು ನಡೆಸಲು ಅಥವಾ ಪ್ರತಿವಾದಿಸಲು ಸಾಕಷ್ಟು ಪ್ರತ್ಯೇಕ ಸ್ವತ್ತನ್ನು ಹೊಂದಿಲ್ಲವೆಂದು ನ್ಯಾಯಾಲಯಕ್ಕೆ ಕಂಡುಬಂದರೆ, ದಾವೆಯು ಇತ್ಯರ್ಥವಾಗುವವರೆಗೆ ದಾವೆಯನ್ನು ನಡೆಸಲು ಅಥವಾ ಪ್ರತಿವಾದಿಸಲು ಅವಳಿಗೆ ಸಾಧ್ಯವಾಗುವಂತೆ ಮಾಡಲು ಮತ್ತು ದಾವೆಯು ಇತ್ಯರ್ಥವಾಗುವವರೆಗೆ ಅವಳ ಜೀವನ ನಿರ್ವಹಣೆಗೆ ಸಾಕಷ್ಟು ಹಣವನ್ನು ಪತ್ನಿಗೆ ಕೊಡಬೇಕೆಂದು ಅದು ಪತಿಗೆ ಆದೇಶಿಸಬಹುದು.

ಪತ್ನಿಯ ವಿರುದ್ಧ ಪತಿಯು ದಾವೆಯನ್ನು ಹೂಡಿದ್ದರೆ, ಅವಳ ಜೀವನದ ಉಳಿದ ಅವಧಿಯವರೆಗೆ ಜೀವನ ನಿರ್ವಹಣೆ ಮತ್ತು ಪಕ್ಷಕಾರರ ಜೀವನದ ಸ್ಥಿತಿಯನ್ನು ಗಮನದಲ್ಲಿರಿಸಿಕೊಂಡು ನ್ಯಾಯಾಲಯವು ನ್ಯಾಯೋಚಿತವೆಂದು ಆಲೋಚಿಸತಕ್ಕಂಥ ಭತ್ಯವನ್ನು ಪತಿಯು ತನ್ನ ಪತ್ನಿಗೆ ಕೊಡಬೇಕೆಂದು ನ್ಯಾಯಾಲಯ ಡಿಕ್ರಿಯ ಮೂಲಕ ಆದೇಶಿಸಬಹುದು. ಹಾಗೆ ಆದೇಶಿಸಲಾದ ಯಾವುದೇ ಭತ್ಯವು, ಪತ್ನಿಯು ತರುವಾಯ ಮದುವೆಯಾದ ಕಾಲದಿಂದ ನಿಂತು ಹೋಗತಕ್ಕದ್ದು.

**29. ಈ ಅಧಿನಿಯಮದ ಮೇರೆಗೆ ಯಾವುದೇ ಅಪೀಲು ಇಲ್ಲ, ಆದರೆ, ನ್ಯಾಯಾಧೀಶನು ಮತಾಂತರದಿಂದ ವಿವಾಹವು ವಿಘಟಿತವಾಗಿದೆಯೇ ಎಂಬ ಪ್ರಶ್ನೆಯನ್ನು ಎತ್ತಿ ಮೊಕದ್ದಮೆಯನ್ನು ನಿರೂಪಿಸಬಹುದು.–** ಈ ಅಧಿನಿಯಮದ ಮೇರೆಗೆ ಹೂಡಲಾದ ಯಾವುದೇ ದಾವೆಯಲ್ಲಿ ಯಾವುದೇ ನ್ಯಾಯಾಲಯವು ಮಾಡಿದ ಯಾವುದೇ ಆದೇಶದ ಅಥವಾ ಡಿಕ್ರಿಯ ವಿರುದ್ಧ ಅಪೀಲಿಗೆ ಅವಕಾಶವಿರತಕ್ಕದ್ದಲ್ಲ; ಆದರೆ, ಅರ್ಜಿದಾರನ/ಳ ಮತಾಂತರದಿಂದಾಗಿ ಪಕ್ಷಕಾರರ ನಡುವೆ ವಿವಾಹವು ವಿಘಟಿತವಾಗಿದೆ ಎಂದು ಮತ್ತು ಅದರ ಪರಿಣಾಮವಾಗಿ ಈ ಅಧಿನಿಯಮದ ಅರ್ಥವ್ಯಾಪ್ತಿಯಲ್ಲಿ ಅರ್ಜಿದಾರನು/ಳು (ಸಂದರ್ಭಾನುಸಾರ) ಪತಿ ಅಥವಾ ಪತ್ನಿಯಲ್ಲವೆಂದು ದಾವೆಯ ಯಾವುದೇ ಹಂತದಲ್ಲಿ, ಪ್ರತ್ಯರ್ಜಿದಾರನು/ಳು ಪ್ರತಿವಾದದ ಮೂಲಕ ಮಂಡಿಸಿದರೆ, ಅಂಥ ಪ್ರತಿವಾದದ ಸಿಂಧುತ್ವದ ಬಗೆಗೆ ನ್ಯಾಯಾಧೀಶನು ಯಾವುದೇ ಸಂದೇಹವನ್ನು ಹೊಂದಿದರೆ, ತಾನಾಗಿಯೇ ಆಗಲಿ, ಅಥವಾ ಪ್ರತ್ಯರ್ಜಿದಾರನ/ಳ ಅರ್ಜಿಯ ಮೇರೆಗಾಗಲಿ ಮೊಕದ್ದಮೆಯನ್ನು ನಿರೂಪಿಸಿ, ಅದರ ಬಗೆಗಿನ ತನ್ನ ಅಭಿಪ್ರಾಯದೊಂದಿಗೆ ಉಚ್ಚ ನ್ಯಾಯಾಲಯದ ತೀರ್ಮಾನಕ್ಕಾಗಿ ಅದನ್ನು ಒಪ್ಪಿಸತಕ್ಕದ್ದು.

**30. ಮೊಕದ್ದಮೆಯು ಅವಶ್ಯ ಸಂಗತಿಗಳನ್ನು ಮತ್ತು ದಸ್ತಾವೇಜುಗಳನ್ನು ನಿರೂಪಿಸತಕ್ಕದ್ದು ಮತ್ತು ದಾವೆಯನ್ನು ತಡೆಹಿಡಿಯತಕ್ಕದ್ದು.–** ಅಂಥ ಸಂಗತಿಗಳು ಮತ್ತು ದಸ್ತಾವೇಜುಗಳ ಮೂಲಕ ಎತ್ತಲಾದ ಪ್ರಶ್ನೆಗಳನ್ನು ತೀರ್ಮಾನಿಸಲು ಉಚ್ಚ ನ್ಯಾಯಾಲಯಕ್ಕೆ ಸಾಧ್ಯವಾಗಲು ಅವಶ್ಯವಾಗಬಹುದಾದಂಥ ಆ ಸಂಗತಿಗಳನ್ನು ಮತ್ತು ದಸ್ತಾವೇಜುಗಳನ್ನು ಅಂಥ ಪ್ರತಿಯೊಂದು ಮೊಕದ್ದಮೆಯು ಸಂಕ್ಷಿಪ್ತವಾಗಿ ನಿರೂಪಿಸತಕ್ಕದ್ದು ಮತ್ತು ಈ ಮುಂದೆ ಉಪಬಂಧಿಸಲಾದಂತೆ ಅಂಥ ನ್ಯಾಯಾಲಯದ ತೀರ್ಮಾನವು ಬರುವವರೆಗೆ ದಾವೆಯನ್ನು ತಡೆಹಿಡಿಯತಕ್ಕದ್ದು.

**31. ಮೊಕದ್ದಮೆಯು ಮೂವರು ನ್ಯಾಯಾಧೀಶರಿಂದ ತೀರ್ಮಾನವಾಗತಕ್ಕದ್ದು.–** ಅಂಥ ನ್ಯಾಯಾಲಯವು, ಯಾವುದಾದರೂ ಪ್ರೆಸಿಡೆನ್ಸಿ ಪಟ್ಟಣದ ಉಚ್ಚ ನ್ಯಾಯಾಲಯವಾಗಿದ್ದರೆ ಅಂಥ ಉಚ್ಚ ನ್ಯಾಯಾಲಯದ ಕಡೆ ಪಕ್ಷ ಮೂರು ಜನ ನ್ಯಾಯಾಧೀಶರಿಂದ ಅಂಥ ಪ್ರತಿಯೊಂದು ಮೊಕದ್ದಮೆಯು ತೀರ್ಮಾನವಾಗತಕ್ಕದ್ದು; ಮತ್ತು ಅರ್ಜಿದಾರನು/ಳು ಅಥವಾ ಪ್ರತ್ಯರ್ಜಿದಾರನು/ಳು ಖುದ್ದಾಗಿ ಅಥವಾ ನ್ಯಾಯವಾದಿಯ ಅಥವಾ ವಕೀಲನ ಮೂಲಕ ಉಚ್ಚ ನ್ಯಾಯಾಲಯದಲ್ಲಿ ಹಾಜರಾಗಬಹುದು ಮತ್ತು ತಮ್ಮ ಅಹವಾಲನ್ನು ಹೇಳಿಕೊಳ್ಳಬಹುದು.

**32. ಸೇರ್ಪಡೆಗಳು ಅಥವಾ ಮಾರ್ಪಾಟುಗಳನ್ನು ಮಾಡುವುದಕ್ಕಾಗಿ ಉಚ್ಚ ನ್ಯಾಯಾಲಯವು ಮೊಕದ್ದಮೆಯನ್ನು ನ್ಯಾಯಾಧೀಶನಿಗೆ ಕಳುಹಿಸಬಹುದು.–** ಮೊಕದ್ದಮೆಯಲ್ಲಿ ನಿರೂಪಿಸಲಾಗಿರುವ ಹೇಳಿಕೆಗಳು, ಆ ಮೂಲಕ ಎತ್ತಲಾದ ಪ್ರಶ್ನೆಗಳನ್ನು ನಿರ್ಧರಿಸಲು ತನಗೆ ಸಾಧ್ಯವಾಗುವಂತೆ ಸಾಕಷ್ಟು ಇಲ್ಲವೆಂದು ಉಚ್ಚ ನ್ಯಾಯಾಲಯಕ್ಕೆ ಮನದಟ್ಟಾದರೆ, ಉಚ್ಚ ನ್ಯಾಯಾಲಯವು ಈ ಬಗ್ಗೆ ನಿರ್ದೇಶಿಸಬಹುದಾದಂಥ ಹೆಚ್ಚಿನ ವಿಷಯಗಳನ್ನು ಅದಕ್ಕೆ ಸೇರಿಸಲು ಅಥವಾ ಅದರಲ್ಲಿ ವ್ಯತ್ಯಾಸಗಳನ್ನು ಮಾಡಲು ಯಾವ ನ್ಯಾಯಾಧೀಶನು ಆ ಮೊಕದ್ದಮೆಯನ್ನು ನಿರೂಪಿಸಿದ್ದಾನೋ ಆ ನ್ಯಾಯಾಧೀಶನಿಗೆ ಅದನ್ನು ವಾಪಸು ಕಳುಹಿಸಬಹುದು.

**33. ಎತ್ತಲಾದ ಪ್ರಶ್ನೆಯನ್ನು ಉಚ್ಚ ನ್ಯಾಯಾಲಯವು ತೀರ್ಮಾನಿಸಬಹುದು ಮತ್ತು ನ್ಯಾಯಾಧೀಶನು ಅದಕ್ಕನುಸಾರವಾಗಿ ಮೊಕದ್ದಮೆಯನ್ನು ವಿಲೆ ಮಾಡತಕ್ಕದ್ದು.–** ಅಂಥ ಯಾವುದೇ ಮೊಕದ್ದಮೆಯನ್ನು ವಿಚಾರಣೆ ಮಾಡಿದ ಮೇಲೆ, ಆ ಮೂಲಕ ಎತ್ತಲಾದ ಪ್ರಶ್ನೆಗಳನ್ನು ತೀರ್ಮಾನಿಸುವುದು, ಮತ್ತು ಅಂಥ ತೀರ್ಮಾನಕ್ಕೆ ಆಧಾರವಾದ ಕಾರಣಗಳೊಂದಿಗೆ ಉಚ್ಚ ನ್ಯಾಯಾಲಯವು ತೀರ್ಪನ್ನು ಕೊಡುವುದು ಕಾನೂನುಬದ್ಧವಾಗಿರತಕ್ಕದ್ದು;

ಮತ್ತು ಮೊಕದ್ದಮೆಯನ್ನು ಯಾವ ನ್ಯಾಯಾಧೀಶನು ನಿರೂಪಿಸಿದ್ದಾನೋ ಆ ನ್ಯಾಯಧೀಶನಿಗೆ ಅಂಥ ತೀರ್ಪಿನ ಒಂದು ಪ್ರತಿಯನ್ನು ನ್ಯಾಯಾಲಯದ ಮೊಹರು ಹಾಕಿ ರಿಜಿಸ್ಟ್ರಾರನ ಸಹಿಯೊಂದಿಗೆ ಕಳುಹಿಸತಕ್ಕದ್ದು ಮತ್ತು ನ್ಯಾಯಾಧೀಶನು ಅದನ್ನು ಸ್ವೀಕರಿಸಿದ ಮೇಲೆ, ಅಂಥ ತೀರ್ಪಿಗೆ ಅನುಗುಣವಾಗಿ ಮೊಕದ್ದಮೆಯನ್ನು ವಿಲೆ ಮಾಡತಕ್ಕದ್ದು.

**34. ರೋಮನ್ ಕ್ಯಾಥೋಲಿಕ್ ವಿವಾಹಗಳ ಉಳಿಸುವಿಕೆ.–** ಈ ಅಧಿನಿಯಮದಲ್ಲಿರುವುದು ಯಾವುದೂ, ರೋಮನ್ ಕ್ಯಾಥೋಲಿಕ್ ಚರ್ಚಿನ ನಿಯಮಗಳಿಗೆ, ಸಂಸ್ಕಾರಗಳಿಗೆ, ಕರ್ಮಾಚರಣೆಗಳಿಗೆ ಮತ್ತು ರೂಢಿಗಳಿಗೆ ಅನುಸಾರವಾಗಿ ನೆರವೇರಿಸಲಾದ, ರೋಮನ್ ಕ್ಯಾಥೋಲಿಕ್ ಮತಕ್ಕೆ ಮತಾಂತರಗೊಂಡ ಯಾರೇ ವ್ಯಕ್ತಿಯ ಯಾವುದೇ ವಿವಾಹವನ್ನು ಅಸಿಂಧುಗೊಳಿಸುವುದೆಂದು ಭಾವಿಸತಕ್ಕದ್ದಲ್ಲ.

**35. ಅಧಿನಿಯಮದ ವ್ಯಾಪ್ತಿ.–** ಈ ಅಧಿನಿಯಮವು ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಕೇಂದ್ರಾಡಳಿತ ಪ್ರದೇಶವಾದ ಮಣಿಪುರವನ್ನು ಹೊರತುಪಡಿಸಿ, ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

**ಮೊದಲನೆ ಅನುಸೂಚಿ**

**(7ನೇ ಪ್ರಕರಣವನ್ನು ನೋಡಿ)**

**ಅರ್ಜಿ ನಮೂನೆ**

| ಮುದ್ರಾಂಕ |
|---|

------------ನ ಸಿವಿಲ್ ನ್ಯಾಯಾಲಯದ ನ್ಯಾಯಾಧೀಶರಿಗೆ,

20-----------ರ-----------ತಿಂಗಳ----------ದಿನ

ಎ.ಬಿ.ಯ ಅರ್ಜಿಯು ಈ ಕೆಳಕಂಡಂತೆ ಇರುತ್ತದೆ:-

1. ನಿಮ್ಮ ಅರ್ಜಿದಾರನು 20------ ರ ------ತಿಂಗಳ ----ದಿನದಂದು ಅಥವಾ ಆ ಸುಮಾರಿಗೆ ಜನಿಸಿರುತ್ತಾನೆ.

2. ನಿಮ್ಮ ಅರ್ಜಿದಾರನು 20-----ರ----ತಿಂಗಳ------ ದಿನದಂದು --------ನಲ್ಲಿ ಸಿ.ಡಿ.ಯನ್ನು ಕಾನೂನುಬದ್ಧವಾಗಿ ವಿವಾಹವಾಗಿದ್ದಾನೆ.

3. ಸದರಿ ಸಿ.ಡಿಯ ಈಗಿನ ವಯಸ್ಸು --------ವರ್ಷಗಳು ಅಥವಾ ಸುಮಾರು-------------ವರ್ಷ ಆಗಿರುತ್ತದೆ.

4. ಅವನ ಸದರಿ ವಿವಾಹದ ಅನಂತರ, ನಿಮ್ಮ ಅರ್ಜಿದಾರನು ಮೇಲೆ ಹೇಳಿದ -------ನಲ್ಲಿ 20-----ರ-----ತಿಂಗಳ----- ದಿನದವರೆಗೆ ತನ್ನ ಸದರಿ ಪತ್ನಿಯ ಜೊತೆಯಲ್ಲಿ ವಾಸವಾಗಿದ್ದನು ಮತ್ತು ಆಕೆಯ ಸಂಗದಲ್ಲಿದ್ದನು.

5. 20----ರ-------ತಿಂಗಳ-------ದಿನಕ್ಕೆ ಹಿಂದೆ ನಿಮ್ಮ ಅರ್ಜಿದಾರನು ಕ್ರೈಸ್ತ ಧರ್ಮಕ್ಕೆ ಮತಾಂತರ ಹೊಂದಿದ್ದನು, ಮತ್ತು ಅಂಥ ದಿನದಂದು ಅವನಿಗೆ ದೀಕ್ಷಾಸ್ನಾನವನ್ನು ಮಾಡಿಸಲಾಯಿತು ಮತ್ತು ಅವನು ----ಚರ್ಚಿನ ಸದಸ್ಯನಾದನು.

6. 20------ರ---------ತಿಂಗಳ---------ದಿನದಂದು (ಅರ್ಜಿಯ ದಿನಾಂಕಕ್ಕೆ ಕನಿಷ್ಠ ಪಕ್ಷ ಆರು ತಿಂಗಳಿಗೂ ಮುಂಚೆ) ಸದರಿ ಸಿ.ಡಿಯು ನಿಮ್ಮ ಅರ್ಜಿದಾರನನ್ನು ತ್ಯಜಿಸಿದಳು ಮತ್ತು ಅಂದಿನಿಂದ ಅವನ ಸಂಗದಲ್ಲಿಲ್ಲ.

7. ಅಂಥ ತ್ಯಜನವು ನಿಮ್ಮ ಅರ್ಜಿದಾರನ ಸದರಿ ಮತಾಂತರದ ಪರಿಣಾಮವಾಗಿದ್ದಿತು.

8. ನಿಮ್ಮ ಅರ್ಜಿದಾರನ ಮತ್ತು ಸದರಿ ಸಿ.ಡಿ.ಗಳು ಯಾವುದೇ ರೀತಿಯಲ್ಲಿ ಶಾಮೀಲಾಗಿಲ್ಲ ಅಥವಾ ಪರೋಕ್ಷ ಸಮ್ಮತಿ ನೀಡಿರುವುದಿಲ್ಲ.

ಆದ್ದರಿಂದ ಸದರಿ ಸಿ.ಡಿಯು ನಿಮ್ಮ ಅರ್ಜಿದಾರನೊಡನೆ ವಾಸ ಮಾಡುವಂತೆ ಮತ್ತು ಸಂಗದಲ್ಲಿರುವಂತೆ ಆದೇಶಿಸಬೇಕೆಂದು, ಅಥವಾ ನಿಮ್ಮ ಅರ್ಜಿದಾರನ ವಿವಾಹವು ವಿಘಟಿತವಾಗಿದೆಯೆಂದು ಘೋಷಿಸಬೇಕೆಂದು ಗೌರವಾನ್ವಿತರಾದ ನಿಮ್ಮಲ್ಲಿ, ನಿಮ್ಮ ಅರ್ಜಿದಾರನು ಪ್ರಾರ್ಥಿಸುತ್ತಾನೆ.

ಎ.ಬಿ.

**ಸತ್ಯಾಪನಾ ನಮೂನೆ**

ಮೇಲಿನ ಅರ್ಜಿಯಲ್ಲಿ ಹೆಸರಿಸಿದ ಅರ್ಜಿದಾರನಾದ ಎ.ಬಿ.ಎಂಬ ನಾನು, ಅದರಲ್ಲಿ ನಿರೂಪಿಸಿರುವುದು ನನಗೆ ತಿಳಿದಿರುವ ಮಾಹಿತಿಯಷ್ಟರಮಟ್ಟಿಗೆ ಮತ್ತು ನಂಬಿರುವಷ್ಟರಮಟ್ಟಿಗೆ ಸತ್ಯವೆಂದು ಘೋಷಿಸುತ್ತೇನೆ.

**ಎರಡನೇ ಅನುಸೂಚಿ**

**(9ನೇ ಪ್ರಕರಣವನ್ನು ನೋಡಿ)**

**ಸಾಮಾನ್ಯ ಮೊಕದ್ದಮೆಗಳಲ್ಲಿ ಕರೆಯಾಜ್ಞೆಯ ನಮೂನೆ**

**ಇವರಿಗೆ (ಸಿ.ಡಿ)**

– – – – – – –

–––––––––––––

ಸದರಿ ಸಿ.ಡಿ. ಯಾದ ನಿಮ್ಮನ್ನು ಕಾನೂನುಬದ್ಧವಾಗಿ ವಿವಾಹವಾಗಿರುವುದಾಗಿ ಕ್ಲೇಮು ಮಾಡುವ –––––––––––ನ ಎ.ಬಿ.ಯು ಸದರಿ ಸಿ.ಡಿ.ಯಾದ ನೀವು ಅವನು [ಅಥವಾ ಅವಳು] ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡ ಪರಿಣಾಮವಾಗಿ ಅವನನ್ನು [ಅಥವಾ ಅವಳನ್ನು] ಆರು ತಿಂಗಳಿನಿಂದ ತ್ಯಜಿಸಿರುವಿರೆಂದು ಆಪಾದಿಸಿ ಮತ್ತು ನೀವು ಅವನೊಡನೆ [ಅಥವಾ ಅವಳೊಡನೆ] ವಾಸಿಸಲು ಮತ್ತು ಸಂಗದಲ್ಲಿರಲು ಸಮ್ಮತಿಸದಿದ್ದಲ್ಲಿ, ಅವನ [ಅಥವಾ ಅವಳ] ವಿವಾಹವು ವಿಘಟಿತವಾಯಿತೆಂದು ಘೋಷಿಸಬೇಕಾಗಿ ಪ್ರಾರ್ಥಿಸಿ, ನಿಮ್ಮ ವಿರುದ್ಧ –––––––––ನ ಸಿವಿಲ್ ನ್ಯಾಯಾಲಯದಲ್ಲಿ ಅವನ [ಅಥವಾ ಅವಳ] ಅರ್ಜಿಯನ್ನು ದಾಖಲು ಮಾಡಿದ್ದಾನೆ/ಳೆ ಇದನ್ನು ನಿಮಗೆ ಜಾರಿ ಮಾಡಿದ ದಿನಾಂಕದಿಂದ –––––––––ದಿನಗಳು (ಕನಿಷ್ಠಪಕ್ಷ ಒಂದು ತಿಂಗಳು) ಮುಕ್ತಾಯವಾದೊಡನೆ, ಸದರಿ ನ್ಯಾಯಾಲಯದಲ್ಲಿ ನೀವು ಹಾಜರಾಗಬೇಕೆಂದು ಮತ್ತು ಸದರಿ ಅರ್ಜಿಗೆ ಉತ್ತರಿಸಬೇಕೆಂದು ಈ ಮೂಲಕ ಆಜ್ಞಾಪಿಸಲಾಗಿದೆ. ಅದರ ಒಂದು ಪ್ರತಿಯನ್ನು ಸದರಿ ನ್ಯಾಯಾಲಯದ ಮೊಹರು ಹಾಕಿ ಈ ಮೂಲಕ ನಿಮಗೆ ಜಾರಿ ಮಾಡಲಾಗಿದೆ.

ಮತ್ತು ಹಾಗೆ ಹಾಜರಾಗಲು ನೀವು ತಪ್ಪಿದಲ್ಲಿ, ಭಾರತ ದಂಡ ಸಂಹಿತೆಯ (1860ರ 45) 174ನೇ ಪ್ರಕರಣದ ಮೇರೆಗೆ ನೀವು ದಂಡನೆಗೆ ಗುರಿಯಾಗುವಿರೆಂದು ನಿಮ್ಮ ಗಮನಕ್ಕೆ ತರಲಾಗಿದೆ.

20–––––––––––––ರ–––––––––––ತಿಂಗಳ–––––––––––ನೇ ದಿನಾಂಕ.

(ಸಹಿ ಮಾಡಲಾಗಿದೆ) ಇ.ಎಫ್.

––––––ನ ಸಿವಿಲ್ ನ್ಯಾಯಾಲಯದ ನ್ಯಾಯಾಧೀಶ.

(ಜಾರಿ ಮಾಡಿದ ಅನಂತರ ಮಾಡಬೇಕಾದ ಹಿಂಬರಹ)

---------------------ಈ ಕರೆಯಾಜ್ಞೆಯನ್ನು ಇದರಲ್ಲಿ ಹೆಸರಿಸಲಾದ ---------ನ ಸಿ.ಡಿ.ಯ ಮೇಲೆ 20--------ರ ----------ತಿಂಗಳ ---------ದಿನದಂದು ----------ನಲ್ಲಿ ಜಿ.ಎಚ್‌ನು ಕ್ರಮಬದ್ಧವಾಗಿ ಜಾರಿ ಮಾಡಿರುತ್ತಾನೆ.

(ಸಹಿ) ಜಿ.ಎಚ್.

**ಮೂರನೆಯ ಅನುಸೂಚಿ**

**(9ನೇ ಪ್ರಕರಣವನ್ನು ನೋಡಿ)**

**ನ್ಯಾಯಾಲಯದಲ್ಲಿ ಹಾಜರಾಗುವುದರಿಂದ ವಿನಾಯಿತಿಯನ್ನು ಪಡೆದಿರುವ ಪ್ರತ್ಯಾರ್ಜಿದಾರನ/ಳ ಸಂದರ್ಭದಲ್ಲಿ ಕರೆಯಾಜ್ಞೆಯ ನಮೂನೆ.**

**ಇವರಿಗೆ (ಸಿ.ಡಿ)**

– – – – –

– – – – –

– – – – –

ಸದರಿ ಸಿ.ಡಿ. ಆದ ನಿಮ್ಮನ್ನು ಕಾನೂನುಬದ್ಧವಾಗಿ ವಿವಾಹವಾಗಿರುವುದಾಗಿ ಕ್ಲೇಮು ಮಾಡುವ –––––––ದ ಎ.ಬಿ.ಯು ಸದರಿ ಸಿ.ಡಿ. ಆದ ನೀವು, ಅವನು [ಅಥವಾ ಅವಳು] ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡ ಪರಿಣಾಮವಾಗಿ ಅವನನ್ನು [ಅಥವಾ ಅವಳನ್ನು] ಆರು ತಿಂಗಳಿನಿಂದ ತ್ಯಜಿಸಿರುವಿರೆಂದು ಆಪಾದಿಸಿ, ಮತ್ತು ನೀವು ಅವನೊಡನೆ [ಅಥವಾ ಅವಳೊಡನೆ] ಸಂಗದಲ್ಲಿರಲು ಸಮ್ಮತಿಸದಿದ್ದಲ್ಲಿ ಅವನ [ಅಥವಾ ಅವಳ] ವಿವಾಹವು ವಿಘಟಿತವಾಯಿತೆಂದು ಘೋಷಿಸಬೇಕಾಗಿ ಪ್ರಾರ್ಥಿಸಿ, ನಿಮ್ಮ ವಿರುದ್ಧ –––––––ನ ಸಿವಿಲ್ ನ್ಯಾಯಾಲಯದಲ್ಲಿ ಅವನು [ಅಥವಾ ಅವಳು] ಅರ್ಜಿಯನ್ನು ದಾಖಲು ಮಾಡಿದ್ದಾನೆ/ಳೆ. ಇದನ್ನು ನಿಮಗೆ ಜಾರಿ ಮಾಡಿದಂದಿನಿಂದ –––––––––ದಿನಗಳು (ಕನಿಷ್ಠ ಪಕ್ಷ ಒಂದು ತಿಂಗಳು) ಮುಕ್ತಾಯವಾದೊಡನೆ, ಸದರಿ ಅರ್ಜಿಗೆ ಸಂಬಂಧಿಸಿ, ಈ ನ್ಯಾಯಾಲಯವು ಹೊರಡಿಸಿದ ಕಮೀಷನ್ನಿನ ಮೇರೆಗೆ ಈ ಬಗ್ಗೆ ಕ್ರಮಬದ್ಧವಾಗಿ ಅಧಿಕೃತರಾದ ಕಮೀಷನರರು ನಿಮಗೆ ಕೇಳಬಹುದಾದ ಪ್ರಶ್ನೆಗಳಿಗೆ ಉತ್ತರಿಸಲು ಸಿದ್ಧವಾಗಿರಬೇಕು ಮತ್ತು ಉತ್ತರಿಸಬೇಕೆಂದು ಈ ಮೂಲಕ ಆಜ್ಞಾಪಿಸಲಾಗಿದೆ ಮತ್ತು ಅದರ ಒಂದು ಪ್ರತಿಯನ್ನು ಸದರಿ ನ್ಯಾಯಾಲಯದ ಮೊಹರು ಹಾಕಿ ಈ ಮೂಲಕ ನಿಮಗೆ ಜಾರಿ ಮಾಡಲಾಗಿದೆ.

ಮತ್ತು ಹಾಗೆ ಸಿದ್ಧವಾಗಲು ಮತ್ತು ಪ್ರಶ್ನೆಗಳಿಗೆ ಉತ್ತರಿಸಲು ನೀವು ತಪ್ಪಿದಲ್ಲಿ, ಭಾರತ ದಂಡ ಸಂಹಿತೆಯ (1860ರ 45) 174ನೇ ಪ್ರಕರಣದ ಮೇರೆಗೆ ನೀವು ದಂಡನೆಗೆ ಗುರಿಯಾಗುವಿರೆಂಬುದನ್ನು ನಿಮ್ಮ ಗಮನಕ್ಕೆ ತರಲಾಗಿದೆ.

20––––ರ–––––––––ತಿಂಗಳ–––––––––ನೇ ದಿನಾಂಕ.

(ಸಹಿ) ಇ.ಎಫ್.

–––––ನ ಸಿವಿಲ್ ನ್ಯಾಯಾಲಯದ ನ್ಯಾಯಾಧೀಶ.

(ಜಾರಿ ಮಾಡಿದ ಅನಂತರ ಮಾಡಬೇಕಾದ ಹಿಂಬರಹ)

ಈ ಕರೆಯಾಜ್ಞೆಯನ್ನು ಮೇಲೆ ಹೆಸರಿಸಲಾದ ಸಿ.ಡಿ.ಗೆ 20----- ರ ----- ತಿಂಗಳ ---------ನೇ ದಿನದಂದು ----------ನಲ್ಲಿ ಜಿ.ಎಚ್‌ನು ಕ್ರಮಬದ್ಧವಾಗಿ ಜಾರಿ ಮಾಡಿರುತ್ತಾನೆ.

(ಸಹಿ) ಜಿ.ಎಚ್.